**ನೂತನ** ಮೊದಲ ಬಾರಿ ಸಂಪೂರ್ಣ ಪೇಪರ್‌ಲೆಸ್ ಕಲಾಪ

# ಈ ಬಾರಿ ಸಂಸತ್ ಮುಂಗಾರು ಅಧಿವೇಶನಕ್ಕೆ ಡಿಜಿಟಲ್ ಸ್ಪರ್ಶ

11-9-2020

ನವದೆಹಲಿ: ಕೊರೋನಾ ಹಿನ್ನೆಲೆ ಈ ಬಾರಿಯ ಸಂಸತ್ತಿನ ಕಲಾಪವನ್ನು ಡಿಜಿಟಲೀಕರಣಗೊಳಿಸಲಾಗಿದೆ. ತನ್ಮೂಲಕ ಸದನದ ಯಾವುದೇ ಸದಸ್ಯರಿಗೂ ಸೋಂಕು ವ್ಯಾಪಿಸದಂತೆ ಹಲವು ಕ್ರಮಗಳನ್ನು ಕೈಗೊಂಡಿದೆ. ಸೆ.14ರಿಂದ ಆರಂಭವಾಗಲಿರುವ ಸಂಸತ್ತಿನ ಕಲಾಪವು ಅ.1ಕ್ಕೆ ಮುಕ್ತಾಯವಾಗಲಿದೆ.



ಈ ಬಗ್ಗೆ ಗುರುವಾರ ಮಾತನಾಡಿದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ 'ಈ ಬಾರಿಯ ಲೋಕಸಭಾ ಕಲಾಪವನ್ನು ಶೇ.62 ರಷ್ಟು ಹಾಗೂ ಮುಂದಿನ ದಿನಗಳಲ್ಲಿ ಸಂಪೂರ್ಣ ಡಿಜಿಟಲೀಕರಣಗೊಳಿಸಲಾಗುತ್ತದೆ. ಸದಸ್ಯರ ಹಾಜರಾತಿಯನ್ನು ಮೊಬೈಲ್ ಆ್ಯಪ್ ಮೂಲಕವೇ ದಾಖಲಿಸಲಾಗುತ್ತದೆ.

ಸದಸ್ಯರು ತಾವು ಕೇಳಬೇಕಿರುವ ಪ್ರಶ್ನೆಗಳನ್ನು ಆನ್‌ಲೈನ್ ಮೂಲಕವೇ ಕೇಳಬೇಕು. ಈಗಾಗಲೇ ಸದಸ್ಯರು ತಮ್ಮ ಪ್ರಶ್ನೆಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸಿದ್ದಾರೆ. ತನ್ಮೂಲಕ ಈ ಬಾರಿಯ ಮುಂಗಾರು ಅಧಿವೇಶನವು ಸಂಪೂರ್ಣ ಪೇಪರ್‌ಲೆಸ್ ಆಗಿರಲಿದೆ. ಅಲ್ಲದೆ, ಸದನಕ್ಕೆ ಹಾಜರಾಗುವ ಎಲ್ಲ ಸದಸ್ಯರು ಕೊರೋನಾ ಪತ್ತೆ ಪರೀಕ್ಷೆ ಮಾಡಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ.